**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಬ್ಯಾಡಗಿ.**

**ಸಿ.ಸಿ. ನಂ. 348/2025.**

**ಸಿ ಡಬ್ಲ್ಯೂಃ 4**

**ಪಿ ಡಬ್ಲ್ಯೂಃ 6**

| | | |
|---|---|---|
| ಹೆಸರು | : | ಚಂದ್ರಶೇಖರ ತೋಟದ |
| ತಂದೆಯ ಹೆಸರು | : | ಶಿವರುದ್ರಪ್ಪ |
| ವಯಸ್ಸು | : | 52 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಹಿರೇಹಳ್ಳಿ |

**ದಿನಾಂಕಃ 27-02-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿ ರವರಿಂದಃ**

ಈಗ ಸಾಕ್ಷಿಗೆ ನಿಪಿ-10 ಪಂಚನಾಮೆಯನ್ನು ತೋರಿಸಿದ್ದು ಸಾಕ್ಷಿ ಅದರಲ್ಲಿಯ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-10 ಡಿ ಎಂದು ಗುರುತಿಸಲಾಯಿತು. ನಿಪಿ-12 ರಿಂದ 19 ಪೋಟೊ ನೋಡಿ ಗುರುತಿಸಿರುತ್ತಾರೆ. ನಾನು ಸಹಿಯನ್ನು 2021 ರಲ್ಲಿ ಮಾಡಿರುತ್ತೇನೆ. ಸದರಿ ಸಹಿಯನ್ನು ಬಡಮಲ್ಲಿ ಗ್ರಾಮದ ಜಮೀನಿನಲ್ಲಿ ಮಾಡಿರುತ್ತೇನೆ. ಘಟನೆಯ ಹಿನ್ನೆಲೆಯಲ್ಲಿ ಪಂಚನಾಮೆಗೆ ಪಡೆದಿರುತ್ತಾರೆ. ಆ ಕಾಲಕ್ಕೆ ಚಾಸಾ-5 ರವರು ಹಾಜರಿದ್ದರು. ಚಾಸಾ-1 ರವರು ಸ್ಥಳ ತೋರಿಸಿರುತ್ತಾರೆ. ಪಂಚನಾಮೆಯನ್ನು ಮದ್ಯಾಹ್ನ 04.00 ರಿಂದ 05.00 ಗಂಟೆ ವರೆಗೆ ಮಾಡಿರುತ್ತಾರೆ. ಸ್ಥಳದಿಂದ 2 ಚಪ್ಪಲಿಯನ್ನು ತೆಗೆದುಕೊಂಡರು. ಸಾಕ್ಷಿ ನ್ಯಾಯಾಲಯದ ಮುಂದಿರುವ 2 ಚಪ್ಪಲಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಎಂ.ಓ 1 ಮತ್ತು 2 ಎಂದು ಗುರುತಿಸಲಾಗಿದೆ.

ಸಿ.ಸಿ. ನಂ. 348/2025 ಸಿ. ಡಬ್ಲ್ಯೂ.4
ಪಿ. ಡಬ್ಲ್ಯೂ.6

**ಪಾಟೀ ಸವಾಲು 1 ರಿಂದ 8 ನೇ ಆರೋಪಿತರ ಪರ ಶ್ರೀ ವಿ.ಎಂ.ಎನ್. ವಕೀಲರಿಂದಃ**

ನನಗೆ ಓದಲು ಬರೆಯಲು ಬರುವುದಿಲ್ಲ ಎಂದರೆ ಸರಿ. ಪಂಚನಾಮೆಯಲ್ಲಿ ಏನು ಬರೆದಿದ್ದಾರೆ ಎಂದು ಹೇಳಲು ಬರುವುದಿಲ್ಲ ಎಂದರೆ ಸರಿ. ಯಾವ ಕಾರಣಕ್ಕಾಗಿ ಫೋಟೊ ತೆಗೆದಿದ್ದಾರೆ ಎಂದು ಹೇಳಲು ಬರುವುದಿಲ್ಲ. ಪಂಚನಾಮೆ ಮಾಡಿದ ಕಾಲಕ್ಕೆ ನೋಟಿಸ್ಸು ನೀಡಿರುವುದಿಲ್ಲ. ಮೃತ ಹೇಮನಗೌಡ ನಮಗೆ ಸಂಬಂಧಿ ಇರುವುದಿಲ್ಲ. ನಮ್ಮ ಊರು ಹಿರೇಹಳ್ಳಿ ಗ್ರಾಮ. ಜಮೀನಿನ ಸರ್ವೆ ನಂ. ಹೇಳಲು ಬರುವುದಿಲ್ಲ. ಚೆಕ್ಕುಬಂದಿ ಹೇಳಲು ಬರುವುದಿಲ್ಲ. ಪಂಚನಾಮೆ ಕಾಲಕ್ಕೆ ಎಷ್ಟು ಜನ ಸೇರಿದ್ದರು ಎಂದು ಹೇಳಲು ಬರುವುದಿಲ್ಲ. ಕೆರಿಯ ಕೆಳಗಡೆ ಸ್ಥಳದಲ್ಲಿ ನಾನು ಚಪ್ಪಲಿಯನ್ನು ನೋಡಿರುತ್ತೇನೆ. ಕೆರೆ ಬಾಜುವಿನ ಜಮೀನಿನಲ್ಲಿ ಚಪ್ಪಲಿಗಳು ಬಿದ್ದಿದ್ದವು. ಆ ಜಮೀನಿನ ಸರ್ವೆ ನಂ ಗೊತ್ತಿಲ್ಲ. ಈ ರೀತಿ ಚಪ್ಪಲಿಗಳು ಎಲ್ಲರ ಮನೆಯಲ್ಲಿರುತ್ತವೆ ಎಂದರೆ ಸರಿ. ಚಪ್ಪಲಿ ಚರ್ಮದ ಚಪ್ಪಲಿ, ಪ್ಲಾಸ್ಟಿಕ್ ಚಪ್ಪಲಿ ಎಂದು ಗೊತ್ತಿಲ್ಲ. ನಾನು ನೋಡಿದ ಚಪ್ಪಲಿ ಕಪ್ಪು ಬಣ್ಣದ ಚಪ್ಪಲಿಗಳು ಇದ್ದವು. ಪಂಚನಾಮೆಯನ್ನು ಸಂಜೆ 04.00 ರಿಂದ 05.00 ಗಂಟೆವರೆಗೆ ಮಾಡಿರುತ್ತಾರೆ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ ಮತ್ತು ಯಾವುದೇ ಚಪ್ಪಲಿ ಜಪ್ತಿ ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಪೋಲಿಸರು ಹೇಳಿದ ಮೇರೆಗೆ ಸಹಿ ಮಾಡಿದ್ದೆ ಎಂದರೆ ಸರಿ. ನಾನು ಸಹಿಯನ್ನು ಪೋಲಿಸ ಠಾಣೆಯಲ್ಲಿ ಮಾಡಿದ್ದೆ ಎಂದರೆ ಸರಿಯಲ್ಲ. ಆ ದಿನ ಜಮೀನಿನಲ್ಲಿ ಯಾವ ಬೆಳೆ ಇತ್ತು ಎಂದು ನನಗೆ ಹೇಳಲು ಬರುವುದಿಲ್ಲ. ನನ್ನ ಸಮಕ್ಷಮ ಹಾತನಕಾಶೆ ತೆಗೆದಿರುವುದಿಲ್ಲ ಅದನ್ನು ನಾನು ನೋಡಿರುವುದಿಲ್ಲ.

9 ರಿಂದ 11 ಆರೋಪಿ ಪರ ವಕೀಲರು 1 ರಿಂದ 8 ಆರೋಪಿತರ ಪರ ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳುತ್ತಾರೆ.

ಸಿ.ಸಿ. ನಂ. 348/2025 ಸಿ. ಡಬ್ಲ್ಯೂ.4
ಪಿ. ಡಬ್ಲ್ಯೂ.6

**ಮರು ವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೆ.ಸರಿ ಇದೆ.

**Sd/-**
ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾಲಯ ಬ್ಯಾಡಗಿ.